724 (1029) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) – ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಕೃಷಿ ಸಾಲಗಳನ್ನು ಮುಖ್ಯವಾಗಿ ಲೇವಾದೇವಿದಾರರಿಂದ ಮತ್ತು ಬ್ಯಾಂಕುಗಳಿಂದ ತೊಂದರೆಗೊಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಕೃಷಿ ಸಾಲಗಳನ್ನು ಮನ್ನಾ ಮಾಡುವ ಪ್ರಸ್ತಾವವು ಸರ್ಕಾರದ ಮುಂದಿದೆಯೇ ?

(ಆ) ಇಲ್ಲದಿದ್ದಲ್ಲಿ ದುಃಖಿತಪ್ತ ರೈತರ ಕುಟುಂಬದವರಿಗೆ ಪರಿಹಾರ ಒದಗಿಸುವ ದೃಷ್ಟಿಯಿಂದ ಅಂತಹ ರೈತರ ಕೃಷಿ ಸಾಲಗಳನ್ನು ಮನ್ನಾ ಮಾಡುವುದು ಅಪೇಕ್ಷಣೀಯವಲ್ಲವೇ ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) –

(ಅ) ಸರ್ಕಾರಿ ಆದೇಶ ಸಂಖ್ಯೆ ಸಿಒ 50 ಸಿಎಲ್‌ಎಸ್ 2007 ದಿನಾಂಕ 16–04–2007 ಮತ್ತು 15–05–2007 ಸಿಒ 64 ಸಿಎಲ್‌ಎಸ್ 2007 ದಿನಾಂಕ 16–04–2007 ಮತ್ತು 15–05–2007, ಸಿಒ 65 ಸಿಎಲ್ ಎಸ್ 2007 ದಿನಾಂಕ 16–04–2007 ಮತ್ತು 15–05–2007 ರ ಪ್ರಕಾರ ರಾಜ್ಯದಲ್ಲಿ ದಿನಾಂಕ 01–01–2006 ರಿಂದ 31–12–2006 ರ ಅವಧಿಯಲ್ಲಿ ಸಹಕಾರಿ ಸಂಸ್ಥೆಗಳಿಂದ ರೈತರು ರೂ 25,000/– ವರೆಗೆ ಪಡೆದಿರುವ ಬೆಳೆ ಸಾಲವನ್ನು ಬಡ್ಡಿಸಹಿತ ಮನ್ನಾ ಮಾಡಲಾಗಿದೆ ರೂ 25,000/– ಕ್ಕೆ ಮೇಲ್ಪಟ್ಟು ಸಾಲ ಪಡೆದಿರುವ ಪ್ರಕರಣಗಳಲ್ಲಿ ರೂ 25,000ಕ್ಕೆ ಮೇಲ್ಪಟ್ಟ ಹೆಚ್ಚುವರಿ ಅಸಲನ್ನು ದಿನಾಂಕ 31–05–2007 ರೊಳಗೆ ಸಂಬಂಧಪಟ್ಟ ಸಹಕಾರಿ ಸಂಸ್ಥೆಗಳಿಗೆ ಮರುಪಾವತಿಸಿದಲ್ಲಿ ರೂ 25,000/– ಅಸಲು ಹಾಗೂ ಮರುಪಾವತಿ ದಿನಾಂಕದವರೆಗೆ ಬಡ್ಡಿಯನ್ನು ಮನ್ನಾ ಮಾಡಲಾಗಿದೆ

(ಆ) ಸಾಲದ ಬಾಧೆಯಿಂದ ಆತ್ಮಹತ್ಯೆ ಸಾಬೀತಾದಂತಹ ಪ್ರಕರಣಗಳಲ್ಲಿ, ಮೃತ ರೈತರ ಕುಟುಂಬಗಳಿಗೆ 1 00 ಲಕ್ಷ ರೂ ಗಳವರೆಗೆ ಪರಿಹಾರ ಧನವನ್ನು ಕೊಡಲಾಗುತ್ತಿದೆ

725 (827) ಶ್ರೀ ಜಯಪ್ರಕಾಶ ಹೆಗ್ಡೆ ಕೆ (ಬ್ರಹ್ಮಾವರ್) – ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(1) ಪ್ರಾಥಮಿಕ ಸಹಕಾರಿ ಬ್ಯಾಂಕುಗಳ ಕೃಷಿ / ಬೆಳೆ ಸಾಲದ ಪೈಕಿ ರೂ 25,000/– ದಂತೆ ಒಟ್ಟು ಮನ್ನಾ ಆದ ಮೊಬಲಗೆಷ್ಟು, ಇದಕ್ಕೆ ಬಿಡುಗಡೆಯಾದ ಮೊಬಲಗೆಷ್ಟು ?

(2) ಈ ಪೈಕಿ ಸಂಪೂರ್ಣ ಬಡ್ಡಿ ಮನ್ನಾ ಆದ ಮೊಬಲಗೆಷ್ಟು ? ಬಿಡುಗಡೆಯಾದ ಮೊಬಲಗೆಷ್ಟು?

(3) ದಿನಾಂಕ 31–12–2006 ರಿಂದ ಪಡೆದ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನು ದಿನಾಂಕ 31–05–2007 ರೊಳಗೆ ಮರು ಪಾವತಿಸಿದವರಿಗೆ ಎಷ್ಟು ಬಡ್ಡಿ ಮನ್ನಾ ಮಾಡಲಾಗಿದೆ? ಇದಕ್ಕೆ ಬಿಡುಗಡೆಯಾದ ಮೊಬಲಗೆಷ್ಟು?

(4) ದಿನಾಂಕ 01–10–2006 ರಿಂದ ಪಡೆದ ಅಲ್ಪಾವಧಿ / ಮಧ್ಯಮಾವಧಿ ಸಾಲವನ್ನು 31–05–2007 ರೊಳಗೆ ಮರು ಪಾವತಿಸಿದವರಿಗೆ ಎಷ್ಟು ಬಡ್ಡಿ ಮನ್ನಾ ಮಾಡಲಾಗಿದೆ ? ಇದಕ್ಕೆ ಬಿಡುಗಡೆಯಾದ ಮೊಬಲಗೆಷ್ಟು ?

(5) ದಿನಾಂಕ 01–10–2006 ರಿಂದ ಪಡೆದ ಅಲ್ಪಾವಧಿ / ಮಧ್ಯಮಾವಧಿ ಸಾಲಗಳಿಗೆ ಶೇ 4 ಬಡ್ಡಿ ದರದಲ್ಲಿ ಸಹಕಾರಿ ಬ್ಯಾಂಕ್ ಸಾಲ ವಿತರಿಸದೇ ಸಹಕಾರಿ ಬ್ಯಾಂಕ್‌ಗಳಿಗೆ ಬರಬೇಕಾದ ಬಡ್ಡಿ ವ್ಯತ್ಯಾಸ ಶೇ 7 5 ಅನ್ನು ಸರ್ಕಾರ ತುಂಬಿ ಕೊಡುವುದೇ ಹಾಗಿದ್ದಲ್ಲಿ ದಿನಾಂಕ 31–03–2007 ಅಂತ್ಯಕ್ಕೆ ಸಾಲ ಮೇಲಣ ಬಡ್ಡಿ ಬಿಡುಗಡೆ ಮಾಡಿರುವುದೆಷ್ಟು ?

(6) ಈ ಹಿಂದೆ ನೀಡಿದ್ದ ಮಧ್ಯಮಾವಧಿ ಸಾಲಗಳಿಗೆ ಶೇ 6 ಬಡ್ಡಿ ಮುಂದುವರೆದಿದ್ದು, ಈ ಪೈಕಿ ದಿನಾಂಕ 31–03–2007 ರ ಅಂತ್ಯಕ್ಕೆ ಮಂಜೂರಾದ ಮೊತ್ತ ಎಷ್ಟು ? ಇದಕ್ಕೆ ಬಿಡುಗಡೆಯಾದ ಮೊಬಲಗೆಷ್ಟು ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) –

(1) ಪ್ರಾಥಮಿಕ ಸಹಕಾರಿ ಬ್ಯಾಂಕುಗಳ ಕೃಷಿ ಬೆಳೆ ಸಾಲದ ಪೈಕಿ ರೂ 25,000/– ದಂತೆ ಒಟ್ಟು ಮನ್ನಾ ಆಗುವ ಮೊಬಲಗು ರೂ 2026 52 ಕೋಟಿ ಎಂದು ಅಂದಾಜಿಸಲಾಗಿದೆ ಹಾಗೂ ಇದಕ್ಕೆ ಬಿಡುಗಡೆಯಾದ ಮೊಬಲಗು ರೂ 750 00 ಕೋಟಿ ಆಗಿರುತ್ತದೆ

(2) ಈ ಪೈಕಿ ಸಂಪೂರ್ಣ ಬಡ್ಡಿ ಮನ್ನಾ ಆದ ಮೊಬಲಗು ಸುಮಾರು ರೂ 104 00 ಕೋಟಿಯಾಗಿರುತ್ತದೆ

(3) ದಿನಾಂಕ 31–12–2006 ರಿಂದ ಪಡೆದ ಅಲ್ಪಾವಧಿ / ಮಧ್ಯಮಾವಧಿ ಸಾಲವನ್ನು ದಿನಾಂಕ 31–05–2007 ರೊಳಗೆ ಮರು ಪಾವತಿಸಿದವರಿಗೆ ಬಡ್ಡಿ ಮನ್ನಾ ರೂ 85 00 ಕೋಟಿ ಆಗಿದ್ದು ಈ ಹಣವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ

(4) ದಿನಾಂಕ 01–01–2006 ರಿಂದ ಪಡೆದ ಅಲ್ಪಾವಧಿ / ಮಧ್ಯಮಾವಧಿ ಸಾಲವನ್ನು ದಿನಾಂಕ 31–05–2007 ರೊಳಗೆ ಮರುಪಾವತಿಸಿದವರಿಗೆ ಬಡ್ಡಿ ಮನ್ನಾ ಮಾಡಿರುವ ಮೊತ್ತ ರೂ 62 03 ಕೋಟಿ ಆಗಿರುತ್ತದೆ ಹಾಗೂ ಈ ಹಣವನ್ನು ಇನ್ನೂ ಬಿಡುಗಡೆ ಮಾಡಿರುವುದಿಲ್ಲ

(5) ದಿನಾಂಕ 01–01–2006 ರಿಂದ ಪಡೆದ ಅಲ್ಪಾವದಿ / ಮಧ್ಯಮಾವಧಿ ಸಾಲಗಳಿಗೆ ಶೇಕಡ 4 ರ ಬಡ್ಡಿ ದರದಲ್ಲಿ ಸಾಲ ನೀಡಿದ ಸಹಕಾರಿ ಬ್ಯಾಂಕುಗಳಿಗೆ ಬರಬೇಕಾದ ಬಡ್ಡಿ ಸಹಾಯಧನ ಗರಿಷ್ಠ ಶೇಕಡ 7 5 ರವರೆಗೆ ಸರ್ಕಾರವು ತುಂಬಿಕೊಡುತ್ತದೆ 2006–07 ನೇ ಸಾಲಿನ ಬೇಡಿಕೆಗೆ ಸಂಬಂಧಿಸಿದಂತೆ ರೂ 1888 00 ಲಕ್ಷಗಳು ಮಂಜೂರಾಗಿದ್ದು, ಇದನ್ನು ಬಿಡುಗಡೆ ಮಾಡಲಾಗುತ್ತಿದೆ

(6) ಈ ಹಿಂದೆ ನೀಡಿದ್ದ ಮಧ್ಯಮಾವಧಿ ಸಾಲಗಳಿಗೆ ಶೇಕಡ 6 ಬಡ್ಡಿ ಮುಂದುವರೆದಿದ್ದು, 2005–06 ನೇ ಸಾಲಿನಲ್ಲಿ ಸಹಕಾರಿ ಸಂಸ್ಥೆಗಳು ರೈತರಿಗೆ ನೀಡಿರುವ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲಗಳಿಗೆ ಸಂಬಂಧಿಸಿದಂತೆ ಸರ್ಕಾರವು ನೀಡಬೇಕಾದ ಬಡ್ಡಿ ಸಹಾಯ ಧನದ ಮೊತ್ತ ರೂ 143 71 ಕೋಟಿ ಆಗಿದ್ದು ಇದರಲ್ಲಿ 115 14 ಕೋಟಿ ರೂ ಗಳನ್ನು ಬಿಡುಗಡೆ ಮಾಡಲಾಗಿದೆ

727 (714) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ(ಬಸವಕಲ್ಯಾಣ) – ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಬೀದರ್ ಜಿಲ್ಲೆಯಲ್ಲಿರುವ ಪಡಿತರ ಅಂಗಡಿಗಳ ಮತ್ತು ಸೀಮೆಎಣ್ಣೆ ಪರವಾನಗಿಗಳ ಸಂಖ್ಯೆ ಎಷ್ಟು,

(ಆ) ನಿಯಮಗಳ ಪ್ರಕಾರ ಎಷ್ಟು ಜನಸಂಖ್ಯೆಗೆ ಒಂದರಂತೆ ಇವುಗಳಿಗೆ ಪರವಾನಗಿಯನ್ನು ನೀಡಲಾಗುವುದು,

(ಇ) ಈ ಪೈಕಿ ಬೀದರ್ ಜಿಲ್ಲೆಗೆ ಇನ್ನೂ ಎಷ್ಟು ಪಡಿತರ ಅಂಗಡಿಗಳು ಹಾಗೂ ಸೀಮೆಎಣ್ಣೆ ಪರವಾನಗಿಗಳ ಅವಶ್ಯಕತೆ ಇದೆ,

(ಈ) ಈ ಅವಶ್ಯಕತೆಯನ್ನು ಪೂರೈಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಗೋವಿಂದ ಎಂ ಕಾರ್ಜೋಳ (ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಸಚಿವರು) –

(ಅ) 724 ನ್ಯಾಯಬೆಲೆ ಅಂಗಡಿ ಮತ್ತು 968 ಸೀಮೆಎಣ್ಣೆ (ನ್ಯಾಯಬೆಲೆ ಅಂಗಡಿದಾರರಿಗೆ ಸಹ ಸೀಮೆಎಣ್ಣೆ ಹಂಚಿಕೆ ಇರುತ್ತದೆ)

(ಆ) ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಂತ್ರಣ ಆದೇಶ, 1992 ರನ್ವಯ ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಠ 500 ಪಡಿತರ ಚೀಟಿಗಳು ಲಭ್ಯವಿದ್ದಲ್ಲಿ ನ್ಯಾಯ ಬೆಲೆ ಅಂಗಡಿ ಮಂಜೂರು ಮಾಡಲಾಗುವುದು

(ಇ) ಹೊಸ ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲು ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ನಿಯಂತ್ರಣ ಆದೇಶ 1992ರ ಅವಕಾಶಗಳಿಗೆಗೊಳಪಟ್ಟು ಮಾರ್ಗಸೂಚಿಗಳನ್ವಯ ಕ್ರಮ ಕೈಗೊಳ್ಳಲಾಗುವುದು)

(ಈ) ನ್ಯಾಯಬೆಲೆ ಅಂಗಡಿ ಮಂಜೂರು ಮಾಡಲು ಅರ್ಜಿ ಸ್ವೀಕರಿಸಲಾಗಿದ್ದು, ಸದರಿ ಅರ್ಜಿಗಳನ್ನು ಸರ್ಕಾರದ ನಿಯಮಗಳ ಪ್ರಕಾರ ವರ್ಗವಾರು (ರೋಸ್ಟರ್ ನಿಯಮದಂತೆ) ಮೀಸಲಾತಿ ಪಟ್ಟಿ ಸಿದ್ದಪಡಿಸಿ